ಮಾಡಿದರೂ ನಕಲು ಎಂದೇ ಆಗುತ್ತದೆ ಎಂಬ ವಿಶ್ವಾಸ. ಬೆಂಕಿಪುರದ ಪಾದ ಪೂಜೆಯಲ್ಲಿ ಸರ್ಕಾರದ ಮಂತ್ರಿಗಳೂ ಸೇರಿಕೊಂಡಿರುವುದರಿಂದ ನನಗಂತೂ ಹೆಚ್ಚಿನ ಲಾಭ ನಿಚ್ಚಳ ಎಂಬ ಆತ್ಮವಿಶ್ವಾಸ ಶ್ರೀಗಳದ್ದು. ಅದಕ್ಕಾಗೆ ಇಂದು ಮುಂಜಾನೆಯೇ ಎದ್ದು ಸಕಲ ಕಾರ್ಯಗಳನ್ನೂ ಮುಗಿಸಿ ಬೆಂಕಿಪುರದ ಮಂಜೇಗೌಡರ ಆಗಮನಕ್ಕಾಗಿ ಕಾದಿದ್ದರು. ಗಡಿಯಾರದ ಮುಳ್ಳು ಅದಾಗಲೇ ಒಂಬತ್ತು ಮೂವತ್ತೆಂದು ತೋರಿಸುತ್ತಿದೆ. ನಿನ್ನೆಯಷ್ಟೆಯೇ ಬಂದಿದ್ದ ಮಂಜೇಗೌಡರು ತಮ್ಮನ್ನು ಕರೆದುಕೊಂಡು ಹೋಗಲು ಸ್ವತಃ ತಾನೇ ಬೆಳಗ್ಗೆ ಒಂಬತ್ತು ಗಂಟೆಗೆ ಬರುವುದಾಗಿ ಹೇಳಿದ್ದರು. ಒಂಬತ್ತು ಮೂವತ್ತರಿಂದ ಹತ್ತು ಮೂವತ್ತರವರೆಗೆ ಗುಳಿಕ ಕಾಲ. ಅಷ್ಟರಲ್ಲಿ ಪಾದ ಪೂಜೆ ನೆರವೇರಬೇಕು. ಅನಂತರದ್ದು ವೇದಿಕೆ ಭಾಷಣ. ಸ್ವಾಮಿಗಳು ಮತ್ತೆ ಮತ್ತೆ ಗಡಿಯಾರ ನೋಡಿಕೊಳ್ಳುತ್ತಾರೆ. ಆ ಕಡೆ ಈ ಕಡೆ ತಿರುಗಾಡುತ್ತಾರೆ. ತಮ್ಮ ವಾಹನದ ಡ್ರೈವರ್ ಸಿದ್ಧನಾಗಿ ಕಾಯುತ್ತಿರುವುದು ಕಾಣುತ್ತಿದೆ. ಸಮಯ ಹತ್ತು ಮೂವತ್ತಾದರೂ ಬರಬೇಕಾದವರ ಸುಳಿವು ಕಾಣದೆ ಹೋದಾಗ, ಕೊನೇಪಕ್ಷ ತಾವೇ ಕರೆ ಮಾಡೋಣವೆಂದು ಮೊಬೈಲ್ ಕೈಗೆತ್ತಿಕೊಂಡರು. ಅದೇ ಸಮಯಕ್ಕೆ ಹೊರಗಡೆ ಬಿಳಿಯ ಕಾರೊಂದು ಬಂದು ನಿಂತಿತು. ಸ್ವಾಮಿಗಳಿಗೆ ಇದು ನಿನ್ನೆ ಬಂದಿದ್ದ ಮಂಜೇಗೌಡರದ್ದೆ ಎಂಬುದು ಖಾತ್ರಿಯಾಗಿ, ಅವಸರವಸರದಿ ತಾವೂ ಮೇಲೆದ್ದರು. ಕಾರಿನಿಂದ ಇಳಿದು ಬಂದವರು ಮಂಜೇಗೌಡರಾಗಿರದೆ ಅದೇ ಊರಿನ ಪಟೇಲ್ ಪರಮೇಶಪ್ಪನವರಾಗಿದ್ದರು. 'ಎಲ್ಲಿ ಮಂಜೇಗೌಡ್ರು, ಯಾಕಿಷ್ಟು ಲೇಟು' ಎಂದು ಸ್ವಾಮಿಗಳು ಅವಸರ ಪಡಿಸಲಾಗಿ, ಪಟೇಲ್ರು, 'ಸ್ವಾಮಿಗಳೆ ಸ್ವಾಮಿಗಳೆ' ಎಂದು ತೊದಲತೊಡಗಿದರು. 'ಏನಾದರೂ ಅಪಶಕುನವಾಯಿತೆ' ಎಂದು ಸ್ವಾಮಿಗಳು ಅನುಮಾನ ವ್ಯಕ್ತಪಡಿಸಲಾಗಿ, ತಡವರಿಸುತ್ತ 'ಸ್ವಾಮಿಗಳೆ ಅದು ಅದು' ಎಂದು, 'ಮಂಜೇಗೌಡರ ಮಗಳು ಸೌಭಾಗ್ಯ ನಿನ್ನೆ ರಾತ್ರಿಯಿಂದ ಕಾಣುಸ್ತಿಲ್ಲ, ಹಟ್ಟಿಯ ರಂಗ ಅನ್ನೋನ್ ಜೊತೆ ಓಡೋಗಿ ಬಿಟ್ಟವ್ಳೆ ಅನ್ನೊ ಸುದ್ದಿ ಎಲ್ಲ ಕಡೆ ಹಬ್ಬಿದೆ, ಗೌಡ್ರು ಮ್ಯಾಕೆ ಎದ್ದಿಲ್ಲ' ಎಂದು ಬೆಂಕಿಪುರದ ಅಸಲಿ ಘಟನೆಯನ್ನ ಮುಚ್ಚು ಮರೆ ಇಲ್ಲದೆ ಪಟೇಲ್ರು ತೆರೆದಿಟ್ಟರು.



ಎಲ್ಲವೂ ಮನವರಿಕೆಯಾದ ಕ್ಷಣದಲ್ಲೆ ಮತ್ತೊಂದು ಕಾರು ಹೊರಗಡೆ ಬಂದು ನಿಂತು ಅದರಿಂದ ದಲಿತ ಸ್ವಾಮಿಗಳು ಹಿರಿಯ ಶ್ರೀಗಳ ಆಹ್ವಾನದ ಮೇರೆಗೆ ನಗು ಮುಖದಿ ಇತ್ತಲೇ ಬರುತ್ತಿದ್ದರು. ಶ್ರೀಗಳ ಮುಖದಲ್ಲಿದ್ದ ಪ್ರಶಾಂತ ಕಳೆ ಒಮ್ಮೆಲೆ ಮಾಯವಾಗಿ, ಕ್ರೋಧಗೊಂಡವರಂತಾಗಿ ಕಪ್ಪಿಟ್ಟು, ಪೀಠದ ಮೇಲೆ ಹಾಗೇ ಒರಗಿದರು.


## ಗುರುಪ್ರಸಾದ್ ಕಂಟಲಗೆರೆ

ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿ ತಾಲ್ಲೂಕಿನವರು. ವೃತ್ತಿಯಲ್ಲಿ ಶಿಕ್ಷಕ. ಕತೆ ಕವಿತೆ ಆಸಕ್ತಿಯ ಕ್ಷೇತ್ರಗಳು. ಪ್ರಕಟಿತ ಪುಸ್ತಕಗಳು: 'ಗೋವಿನ ಜಾಡು', 'ಕೆಂಡದ ಬೆಳುದಿಂಗಳು' (ಕಥಾಸಂಕಲನಗಳು), 'ಕಪ್ಪು ಕೋಣಗಳು' (ಕವನ ಸಂಕಲನ), 'ದಲಿತ ಸಾಂಸ್ಕೃತಿಕ ಕಥನಗಳ ಅಧ್ಯಯನ' (ಸಂಶೋಧನೆ). 2019ರ 'ಪ್ರಜಾವಾಣಿ ದೀಪಾವಳಿ ಕಥಾಸ್ಪರ್ಧೆ'ಯಲ್ಲಿ ಅವರ ಕತೆಗೆ ಮೊದಲ ಬಹುಮಾನ ಬಂದಿದೆ.